**ಸಾಕ್ಷಿಯನ್ನು ದಿಃ 23.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 7 ರಿಂದ 10 ನೇವಾದಿ ಪರ ವಕೀಲರಿಂದಃ**

1. ಈ ದಾವೆಯ 9 ಮತ್ತು 10 ನೇ ಪ್ರತಿವಾದಿಯರ ವಿರುದ್ಧ 11 ನೇ ಪ್ರತಿವಾದಿಯು ಮಾನ್ಯ ಹಿರಿಯ ನ್ಯಾಯಾಲಯ, ಪಿರಿಯಾಪಟ್ಟದಲ್ಲಿ ಅ.ದಾ.ನಂ.31/2019 ರಂತೆ ಭಾಗಾಂಶ ಕೋರಿ ದಾವೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ನೀವು ಸಾಕ್ಷಿ ನೀಡಿದ್ದೀರಾ ಎಂದರೆ, ಅವರು ನನ್ನ ಅಣ್ಣನ ಮಗಳು ಎಂದು ಮಾತ್ರ ಸಾಕ್ಷಿ ನುಡಿದಿದ್ದೇನೆ.

2. ನಿಮಗೆ ಹಾಗೂ 8 ರಿಂದ 10 ನೇ ಪ್ರತಿವಾದಿಗಳಿಗೆ ಮೊದಲಿನಿಂದಲೂ ಅನ್ಯೋನ್ಯತೆ ಇಲ್ಲ ಎಂದರೆ ಸರಿ.

3. 1 ರಿಂದ 11 ನೇ ಪ್ರತಿವಾದಿಗಳು ಎಲ್ಲೆಲ್ಲಿ ವಾಸ ಮಾಡುತ್ತಿದ್ದಾರೆ ಎಂದು ನಾನು ಹೋಗಿ ನೋಡಿಕೊಂಡು ಬಂದಿರುತ್ತೇನೆ.

4. ಪಿ.ಕೆ.ಕಮಲಮ್ಮ ನವರು ಕಳೆದ 20 ವರ್ಷಗಳಿಂದ ಅಮೇರಿಕಾದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ, ಇಲ್ಲ, ಅವರ ನೆಂಟರಾದ ಸುಜಾತಾ ರವರ ಮನೆಯಲ್ಲಿ ಇದ್ದಾರೆ. ಅವರ ಮಕ್ಕಳು ಅಮೇರಿಕಾದಲ್ಲಿದ್ದು, ಆಗಾಗ ಹೋಗಿ ಬರುತ್ತಾರೆ. ಸದರಿಯವರ ಆಧಾರ್ ಕಾರ್ಡ್ ಹಾಗೂ ಚುನಾವಣಾ ಗುರುತಿನ ಚೀಟಿಯನ್ನು ನಾನು ನೊಡಿಲ್ಲ. ಸದರಿಯವರು ಅವರ ನೆಂಟರ ಮನೆಲ್ಲಿ ಇದ್ದಾರೆ ಎಂದು ಯಾರು ಮಾಹಿತಿ ನೀಡಿದರು ಎಂದರೆ, ನನಗೆ ಮೊದಲಿನಿಂದಲೂ ಗೊತ್ತಾಯಿತು ಎಂದು ನುಡಿಯುತ್ತಾರೆ.

5. ಸದರಿಯವರು ಚಿಕ್ಕವಡ್ಡರಕೇರಿಯಲ್ಲಿ ಎಂದೂ ವಾಸವಿಲ್ಲ, ಅಮೇರಿಕಾದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಸದರಿಯವರನ್ನು ನಾನು 1 ವರ್ಷದ ಹಿಂದ ವಡ್ಡರಕೇರಿ ಗ್ರಾಮದಲ್ಲಿ ಭೇಟಿ ಮಾಡಿರುತ್ತೇನೆ.

6. ಈ ದಾವೆ ಹಾಕುವ ಎಷ್ಟು ವರ್ಷ ಮುಂಚೆ ಪಿ.ಕೆ.ನಾರಾಯಣರವರು ಒತ್ತುವರಿ ಮಾಡಿ ದಾವಾ ಸ್ವತ್ತಿನಲ್ಲಿ ವಾಣಿಜ್ಯ ಮಳಿಗೆ ಕಟ್ಟಿದ್ದಾರೆ ಎಂದರೆ, 4 ವರ್ಷದ ಹಿಂದೆ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮಳಿಗೆ ಕಟ್ಟಲು ಅಂದಾಜು ಎಷ್ಟು ಖರ್ಚಾಗಿದೆ ಎಂದರೆ, ಅಂದಾಜು ಒಂದು ಕೋಟಿ ಮೇಲೆ ಖರ್ಚು ಮಾಡಿರಬಹುದು. ಅಲ್ಲಿ ಲಾಡ್ಜ್, ಸುಮಾರು 20 ಅಂಗಡಿ ಮಳಿಗೆ, ಟೈರ್ ಶಾಪ್ ಗಳು ಇವೆ ಎಂದರೆ, ಅವರು ಖರೀದಿಸಿದ ಜಮೀನಿನಲ್ಲಿ ಮಾಡಿದ್ದಾರೆ, ಸ.ನಂ.83 ರಲ್ಲಿ ಮಾಡಿಲ್ಲ ಎಂದು ನುಡಿಯುತ್ತಾರೆ.

7. ನೀವು ಬರೆಸಿದ ಸ.ನಂ.83 ರಲ್ಲಿ ವಾಸದ ಮನೆ ಕಟ್ಟಿದ್ದಾರೆ. ಅದು ಎರಡು ಅಂತಸ್ತು ಇರಬಹುದು. ಅದರ ಉದ್ದ ಅಂದಾಜು 60-70 ಅಡಿ ಇದೆಯಾ ಎಂದರೆ, ಇರಬಹುದು ಎಂದು ನುಡಿಯುತ್ತಾರೆ. ಅದರ ಅಗಲ ಸುಮಾರು 50 ಅಡಿ ಇರಬಹುದಾ? ಎಂದರೆ, ಇರಬಹುದು ನಿಖರವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

8. ಸದರಿ ಮೇಲೆ ಹೇಳಿದ ವಾಸದ ಮನೆಯ ಮೇಲೆ ನಿಮಗೆ ಹಕ್ಕು ಇದೆಯಾ ಎಂದರೆ, ಇದೆ ಎಂದು ನುಡಿಯುತ್ತಾರೆ.

9. 2 ನೇ ಪ್ರತಿವಾದಿ ವಾಣಿಜ್ಯ ಮಳಿಗೆ ಕಟ್ಟಲು ನಿಮ್ಮ ಅನುಮತಿ ಪಡೆದಿದ್ದರಾ ಎಂದರೆ, ಇಲ್ಲ.

10. ಸ.ನಂ.83 ರ 1 ಎಕರೆ 37 ಗುಂಟೆ ಪೈಕಿ, ನಿಮ್ಮ ಅಣ್ಣ ನಾರಾಯಣ ಹಾಗೂ ತಮ್ಮ ವಾಸುದೇವ ಇಬ್ಬರೂ ಸೇರಿ 6 ಗುಂಟೆಯನ್ನು ಶರವಣ ಹಾಗೂ ರಾಣಿ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ, ನನಗೆ ಗೊತ್ತಿಲ್ಲ.

11. ದಾವಾ ಸ್ವತ್ತಿನ ಸ.ನಂ.83 ರ ಪಹಣಿಯಲ್ಲಿ ಶರವಣ ಹಾಗೂ ರಾಣಿ ರವರ ಹೆಸರು ಬರುತ್ತಿದೆಯಾ ಇಲ್ಲವಾ ಎಂದರೆ, ಇಲ್ಲ ಎಂದು ನುಡಿಯುತ್ತಾರೆ.

12. ಶರವಣ ಹಾಗೂ ರಾಣಿ ರವರು ಸದರಿ 6 ಗುಂಟೆಯನ್ನು ಅನ್ಯಕ್ರಾಂತ ಮಾಡಿ, ಇಟ್ಟಿಗೆ ಫ್ಯಾಕ್ಟರಿ ನಡೆಸುತ್ತಿದ್ದಾರೆ ಎಂದರೆ, ಇರಬಹುದು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ